

بسم اللہِ الرّحمٰن الرّحیم

# ಪ್ರವಾದಿ ಚರಿತ್ರೆ – ಉಹುದ್ ಯುದ್ಧ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **15–12–2023** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ.

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ. بِسْمِ اللّٰهِ الرَّحْمٰنِ الرَّحِيْمِ.

اَلْحَمْدُ لِلّٰهِ رَبِّ الْعٰلَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. إِيَّاكَ نَعْبُدُ وَإِيَّاكَ نَسْتَعِيْنُ.

اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಹಝ್ರತ್ ಪೈಗಂಬರ್(ಸ)ರ ಜೀವನಚರಿತ್ರೆಗೆ ಸಂಬಂಧಪಟ್ಟು ಉಹುದ್ ಯುದ್ಧದ ಪ್ರಸ್ತಾಪ ನಡೆಯುತ್ತಿತ್ತು. ಅದರ ಇನ್ನಷ್ಟು ವಿವರಣೆ ಹೀಗಿದೆ: ಹಝ್ರತ್ ಪೈಗಂಬರ್(ಸ) ಉಹುದ್ ಮೈದಾನದಲ್ಲಿ ತಂಗಿದರು. ಮುಸ್ಲಿಂ ಸೇನೆಯ ಹಿಂಭಾಗದ ಒಂದೆಡೆ ಉಹುದ್ ಪರ್ವತವಿತ್ತು. ಈ ಕಾರಣದಿಂದ ಹಿಂದಿನಿಂದ ಆಗುವ ದಾಳಿಯಿಂದ ಮುಸ್ಲಿಂ ಸೇನೆ ಸುರಕ್ಷಿತವಾಗಿತ್ತು. ಆದರೆ ಒಂದೆಡೆ ಪರ್ವತ ಮಾರ್ಗವಿತ್ತು. (ಮೌಂಟೇನ್ ಪಾಸ್). ಆ ಮಾರ್ಗವಾಗಿ ಶತ್ರುಗಳು ಆಕ್ರಮಣ ನಡೆಸಬಹುದಾಗಿತ್ತು. ಆದ್ದರಿಂದ ಹಝ್ರತ್ ಪೈಗಂಬರ್(ಸ) ಈ ಸೂಕ್ಷ್ಮ ಸ್ಥಿತಿ ಮತ್ತು ಅಪಾಯವನ್ನು ಅರಿತುಕೊಂಡು ಬಿಲ್ಲುಗಾರರಾದ ಐವತ್ತು ಸಹಾಬಿಯರ ಒಂದು ತುಕಡಿಯನ್ನು ಹಝ್ರತ್ ಅಬ್ದುಲ್ಲಾಹ್ ಬಿನ್ ಜುಬೈರ್(ರ)ರ ನೇತೃತ್ವದಲ್ಲಿ ಆ ಕಣಿವೆಯಲ್ಲಿ ನೇಮಿಸಿದರು. ಈ ಬಿಲ್ಲುಗಾರರಿಗೆ ಹಝ್ರತ್ ಪೈಗಂಬರ್(ಸ) ಹೀಗೆ ನಿರ್ದೇಶನ ನೀಡಿದ್ದರು: ನಮ್ಮನ್ನು ಹದ್ದುಗಳು ಹೆಕ್ಕಿಕೊಂಡು ಹೋಗುವುದಾಗಿ ಕಂಡರೂ ಅಥವಾ ನಾವು ಶತ್ರು ಸೇನೆಯನ್ನು ಸೋಲಿಸಿ ಅವರನ್ನು ನಾಶಮಾಡಿದ್ದಾಗಿ ನೋಡಿದರೂ ಕೂಡ ನನ್ನ ಸಂದೇಶ ನಿಮಗೆ ಲಭಿಸುವ ತನಕ ಖಂಡಿತವಾಗಿಯೂ ನೀವು ಈ ಜಾಗವನ್ನು ತೊರೆಯಬಾರದು.

ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದ್ದಾಗಿ ಒಬ್ಬ ಚರಿತ್ರೆಗಾರ ಬರೆಯುತ್ತಾರೆ: ಶತ್ರುಗಳು ನಮ್ಮ ಹಿಂದಿನಿಂದ ದಾಳಿ ಮಾಡದೇ ಇರಲಿಕ್ಕಾಗಿ ನೀವು ಅವರ ಕುದುರೆಸವಾರರ ಸಂಘವನ್ನು ನಮ್ಮಿಂದ ದೂರ ಇರಿಸಿರಿ. ನೀವು ನಿಮ್ಮ ಜಾಗದಲ್ಲಿ ಇರುವ ವರೆಗೂ ನಾವು ಶತ್ರುಗಳ ಮೇಲೆ ಜಯಶಾಲಿಯಾಗಿರುವೆವು. ಅನಂತರ ಹೀಗೆ ಹೇಳಿದರು: ಹೇ ಅಲ್ಲಾಹ್, ನಾನು ನಿನ್ನನ್ನು ಇವರ ಮೇಲೆ ಸಾಕ್ಷಿಯನ್ನಾಗಿ ಮಾಡುತ್ತೇನೆ.

ಒಬ್ಬ ಲೇಖಕ ಹೀಗೆ ಬರೆದಿರುವರು: ಹಝ್ರತ್ ಪೈಗಂಬರ್(ಸ)ರ ಈ ಯುದ್ಧ ತಂತ್ರ ಎಷ್ಟು ಉತ್ತಮ ಮತ್ತು ಶ್ರೇಷ್ಠವಾಗಿತ್ತು ಎಂದರೆ, ಇದರಿಂದ ಹಝ್ರತ್ ಪೈಗಂಬರ್(ಸ)ರಿಗೆ ಸೇನೆಯನ್ನು ಮುನ್ನಡೆಸಲು ಇದ್ದ ಅಸಾಧಾರಣವಾದ ಸಾಮರ್ಥ್ಯದ ಬಗ್ಗೆ ತಿಳಿದುಬರುತ್ತದೆ ಹಾಗೂ ಒಬ್ಬ ಸೇನಾಧಿಪತಿ ಎಷ್ಟೇ ಬುದ್ಧಿವಂತನಾಗಿದ್ದರೂ ಕೂಡ ಹಝ್ರತ್ ಪೈಗಂಬರ್(ಸ)ರಿಗಿಂತ ಹೆಚ್ಚು ಸೂಕ್ಷ್ಮ, ಉತ್ತಮ ಮತ್ತು ಯುಕ್ತಿಯಿಂದ ಕೂಡಿದ ಯುದ್ಧತಂತ್ರವನ್ನು ರಚಿಸಲು ಸಾಧ್ಯವಲ್ಲ ಎಂದು ಸಾಬೀತಾಗುತ್ತದೆ.

ಬಿಲ್ಲುಗಾರರ ತಂಡವನ್ನು ಉಹುದ್ ಪರ್ವತದ ಮೇಲೆ ನೇಮಿಸಿದ ನಂತರ ಹಝ್ರತ್ ಪೈಗಂಬರ್(ಸ) ಸಮಾಧಾನಗೊಂಡರು ಮತ್ತು ಪಂಕ್ತಿಗಳನ್ನು ಅಣಿಗೊಳಿಸಲು ತೊಡಗಿದರು. ಸೈನಿಕರ ಸಂಖ್ಯೆ ಮತ್ತು ಯುದ್ಧ ಸಾಮಾನುಗಳ ದೃಷ್ಟಿಯಲ್ಲಿ ಮುಸ್ಲಿಮರ ಸ್ಥಿತಿ ಬಾಹ್ಯವಾಗಿ ದುರ್ಬಲವಾಗಿತ್ತು. ಮುಶ್ರಿಕರ ಸೇನೆಯು ಹತ್ತು ಪಂಕ್ತಿಗಳಿದ್ದುವು. ಇಸ್ಲಾಮಿನ ಸೇನೆಯು ಕೇವಲ ಎರಡು ಸಾಲುಗಳಿದ್ದುವು. ಐವತ್ತು ಬಿಲ್ಲುಗಾರರು ಕಣಿವೆಯಲ್ಲಿದ್ದರು. ಹಝ್ರತ್ ಪೈಗಂಬರ್(ಸ) ನಮ್ರತೆ ಮತ್ತು ವಿನಯದೊಂದಿಗೆ ಅಲ್ಲಾಹನ ಸನ್ನಿಧಿಯಲ್ಲಿ ದುಆಗಳನ್ನು ಮಾಡುತ್ತಿದ್ದರು. ಹಝ್ರತ್ ಅನಸ್(ರ) ವರದಿ ಮಾಡುತ್ತಾರೆ. ಹಝ್ರತ್ ಪೈಗಂಬರ್(ಸ) ಉಹುದಿನ ದಿನದಂದು ಹೀಗೆ ದುಆ ಮಾಡುತ್ತಿದ್ದರು: ಹೇ ಅಲ್ಲಾಹ್, ನೀನು ಸಹಾಯ ಮಾಡದಿದ್ದರೆ ಭೂಮಿಯಲ್ಲಿ ನಿನ್ನ ಆರಾಧನೆಯನ್ನು ಮಾಡುವವರಾಗಿ ಯಾರೂ ಉಳಿಯಲಾರರು. ಬದ್ರ್ ಯುದ್ಧದಂದು ಸಹ ಇದೇ ದುಆವನ್ನು ಮಾಡಲಾಗಿತ್ತು ಎಂದು ಕೆಲವು ವರದಿಗಳಲ್ಲಿ ಇದೆ.

ಹಝ್ರತ್ ಸಅದ್ ಬಿನ್ ವಖಾಸ್(ರ) ವರದಿ ಮಾಡುತ್ತಾರೆ. ಅಬ್ದುಲ್ಲಾಹ್ ಬಿನ್ ಜಹಶ್(ರ) ಹೀಗೆ ಹೇಳಿದರು: ಬನ್ನಿರಿ, ನಾವಿಬ್ಬರೂ ಸೇರಿ ದುಆ ಮಾಡೋಣ. ಹಝ್ರತ್ ಸಅದ್(ರ) ಹೀಗೆ ದುಆ ಮಾಡಿದರು: ಹೇ ನನ್ನ ಪ್ರಭೂ, ನಾಳೆ ಶತ್ರುಗಳೊಡನೆ ನಮ್ಮ ಮುಖಾಮುಖಿಯಾಗುವಾಗ ನನ್ನ ಹೋರಾಟ ಅತಿ ಶಕ್ತಿಶಾಲಿಯಾದ ಯೋಧನೊಡನೆ ಆಗಿ ನಾನು ಆತನನ್ನು ವಧಿಸುವಂತೆ ಆಗಲಿ. ಅಬ್ದುಲ್ಲಾಹ್ ಬಿನ್ ಜಹಶ್(ರ) ಹೀಗೆ ದುಆ ಮಾಡಿದರು: ಹೇ ಅಲ್ಲಾಹ್, ನನ್ನ ಮೂಗು ಮತ್ತು ಕಿವಿಯನ್ನು ಕತ್ತರಿಸುವ ಒಬ್ಬ ಅತಿ ಶಕ್ತಿಶಾಲಿ ವ್ಯಕ್ತಿಯೊಂದಿಗೆ ನನ್ನ ಮುಖಾಮುಖಿಯಾಗಲಿ ಹಾಗೂ ನಿನ್ನ ಮತ್ತು ನಿನ್ನ ರಸೂಲಿನ ಸಂಪ್ರೀತಿಗಾಗಿ ನನ್ನ ಸ್ಥಿತಿ ಹೀಗೆ ಆಯಿತು ಎಂದು ನಿನ್ನನ್ನು ಭೇಟಿಯಾಗುವಾಗ ನಾನು ಹೇಳುವಂತಾಗಲಿ. ಹೀಗೆ ಅವರಿಬ್ಬರ ಪ್ರಾರ್ಥನೆಗಳ ಪ್ರಕಾರವೇ ಯುದ್ಧದಲ್ಲಿ ಸಂಭವಿಸಿತು.

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಸೀರತ್ ಖಾತಮುನ್ನಬಿಯ್ಯೀನ್‌ನಲ್ಲಿ ಬರೆಯುತ್ತಾರೆ. ತನ್ನ ಸೇನೆಯ ಹಿಂಭಾಗವನ್ನು ಪೂರ್ಣವಾಗಿ ಸುರಕ್ಷಿತಗೊಳಿಸಿದ ನಂತರ ಹಝ್ರತ್ ಪೈಗಂಬರ್(ಸ) ಇಸ್ಲಾಮಿನ ಸೇನೆಯನ್ನು ಅಣಿಗೊಳಿಸಿದರು ಮತ್ತು ವಿವಿಧ ಸೇನಾ ತುಕಡಿಗಳಿಗೆ ಬೇರೆ ಬೇರೆ ಅಮೀರರನ್ನು ನಿಶ್ಚಯಿಸಿದರು. ಖುರೈಶಿಯರ ಧ್ವಜವು ತಲ್‌ಹನ ಕೈಯಲ್ಲಿದೆ ಎಂದು ಈ ಸಂದರ್ಭದಲ್ಲಿ ಹಝ್ರತ್

ಪೈಗಂಬರ್(ಸ)ರಿಗೆ ತಿಳಿಸಲಾಯಿತು. ಖುರೈಶಿನ ಅತ್ಯುನ್ನತ ವಾರಸುದಾರರಾದ ಖುಸ್ಸಾ ಬಿನ್ ಕಿಲಾಬ್ ಸ್ಥಾಪಿಸಿದ ವ್ಯವಸ್ಥೆಯ ಅಧೀನದಲ್ಲಿ ಯುದ್ಧದಲ್ಲಿ ಖುರೈಶಿನ ಧ್ವಜವನ್ನು ಎತ್ತಲು ಅಧಿಕಾರವನ್ನು ಹೊಂದಿದ್ದ ಕುಟುಂಬದೊಂದಿಗೆ ತಲ್‌ಹ ಸಂಬಂಧ ಹೊಂದಿದ್ದನು. ಇದು ಗೊತ್ತಾದಾಗ ಹಝ್ರತ್ ಪೈಗಂಬರ್(ಸ) ಹೇಳಿದರು: ಸಾಮುದಾಯಿಕ ನಿಷ್ಠೆ ತೋರಿಸಲು ನಾವು ಹೆಚ್ಚು ಹಕ್ಕುದಾರರು. ಹೀಗೆ ಹೇಳುತ್ತಾ ಹಝ್ರತ್ ಅಲಿ(ರ)ರಿಂದ ಹಝ್ರತ್ ಪೈಗಂಬರ್(ಸ) ಮುಹಾಜಿರರ ಧ್ವಜವನ್ನು ಪಡೆದು ಮುಸ್‌ಅಬ್ ಬಿನ್ ಉಮೈರ್(ರ)ರಿಗೆ ಒಪ್ಪಿಸಿದರು. ಅವರು ತಲ್‌ಹ ಸಂಬಂಧ ಹೊಂದಿದ್ದ ಅದೇ ಕುಟುಂಬದ ಒಬ್ಬ ಸದಸ್ಯರಾಗಿದ್ದರು. ಶತ್ರು ಪಕ್ಷದಲ್ಲಿ ಅಬೂಸುಫ್‌ಯಾನ್ ಸೇನಾಧಿಪತಿಯಾಗಿದ್ದನು ಮತ್ತು ಮಹಿಳೆಯರು ಸೇನೆಯ ಹಿಂದೆ ಡೋಲು ಬಾರಿಸುತ್ತಾ, ಕವಿತೆಗಳನ್ನು ಹಾಡುತ್ತಾ ಪುರುಷರಲ್ಲಿ ಆವೇಶ ಹುಟ್ಟಿಸುತ್ತಿದ್ದರು.

ಯುದ್ಧವನ್ನು ಅಬೂ ಆಮಿರ್ ಆರಂಭಿಸಿದನು. ಆತ ಔಸ್ ಗೋತ್ರದವನಾಗಿದ್ದನು ಮತ್ತು ಮದೀನದ ನಿವಾಸಿಯಾಗಿದ್ದನು. ಹಝ್ರತ್ ಪೈಗಂಬರ್(ಸ)ರೊಂದಿಗೆ ಇದ್ದ ವೈರ ಮತ್ತು ಅಸೂಯೆಯ ಕಾರಣದಿಂದ ಆತ ಮಕ್ಕಕ್ಕೆ ಓಡಿ ಹೋಗಿದ್ದನು. ಯುದ್ಧ ಮೈದಾನಕ್ಕೆ ಹೊರಡುವಾಗ ಆತನ ಗೋತ್ರದವರು ಆತನ ಜೊತೆ ಬಂದು ಸೇರುವರು ಎಂಬ ತಪ್ಪುಗ್ರಹಿಕೆಯಲ್ಲಿ ಆತನು ಇದ್ದನು. ಈ ಪ್ರತೀಕ್ಷೆಯಿಂದ ಆತನು ಉಚ್ಚ ಸ್ವರದಲ್ಲಿ ಹೀಗೆ ಕರೆದನು: 'ಹೇ ಔಸ್‌ನ ಸೈನಿಕರೇ ನಾನು ಅಬೂ ಆಮಿರ್ ಆಗಿರುವೆನು.' ಆಗ ಅನ್ಸಾರ್ ಸಹಾಬಿಯರು ಹೇಳಿದರು: 'ಹೇ ದುಷ್ಟ, ನಿನ್ನ ಕಣ್ಣುಗಳು ಆನಂದಗೊಳ್ಳದಿರಲಿ.' ಆತನೆಡೆಗೆ ಕಲ್ಲುಗಳನ್ನು ಎಸೆದಾಗ ಆತ ತನ್ನ ಸಂಗಡಿಗರ ಸಮೇತ ಅಲ್ಲಿಂದ ಪರಾರಿಯಾದನು.

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಇದರ ವಿವರಣೆಯಲ್ಲಿ ಬರೆಯುತ್ತಾರೆ: ಅಬೂ ಆಮಿರ್ ಮತ್ತು ಆತನ ಜೊತೆಗಾರರು ಓಡಿ ಹೋಗುತ್ತಿರುವ ದೃಶ್ಯವನ್ನು ಕಂಡು ಖುರೈಶಿನ ಧ್ವಜವಾಹಕನಾದ ತಲ್‌ಹ ಬಹಳ ಆವೇಶದಿಂದ ಮುಂದಕ್ಕೆ ಧಾವಿಸಿದನು ಮತ್ತು ಬಹಳ ಅಹಂಕಾರದ ಶೈಲಿಯಲ್ಲಿ ಸೆಣಸಾಡಲು ಆಹ್ವಾನಿಸಿದನು. ಹಝ್ರತ್ ಅಲಿ(ರ) ಮುಂದಕ್ಕೆ ಧಾವಿಸಿ ಮೂರು ನಾಲ್ಕು ಹೊಡೆತದಲ್ಲೇ ತಲ್‌ಹನನ್ನು ತುಂಡರಿಸಿದರು. ಅನಂತರ ಖುರೈಶಿನ ಕಡೆಯಿಂದ ಸುಮಾರು ಒಂಬತ್ತು ವ್ಯಕ್ತಿಗಳು ಸರದಿಯಂತೆ ತಮ್ಮ ಕೋಮಿನ ಪತಾಕೆಯನ್ನು ತಮ್ಮ ಕೈಗಳಲ್ಲಿ ಹಿಡಿದು ಮುಂದೆ ಬಂದರು. ಆದರೆ ಎಲ್ಲರೂ ಒಬ್ಬೊಬ್ಬರಾಗಿ ಮುಸ್ಲಿಮರ ಕೈಗಳಿಂದ ವಧಿಸಲ್ಪಟ್ಟರು.

ಒಟ್ಟಿನಲ್ಲಿ ಖುರೈಶಿನ ಧ್ವಜವಾಹಕರು ವಧಿಸಲ್ಪಟ್ಟ ನಂತರ ಇಬ್ಬದಿಯ ಸೇನೆಗಳ ನಡುವೆ ಹೋರಾಟ ಆರಂಭವಾಯಿತು ಮತ್ತು ಘೋರವಾದ ಯುದ್ಧ ನಡೆಯಿತು. ಒಂದು ದೀರ್ಘ ಸಮಯದ ವರೆಗೂ ಇರುಪಕ್ಷಗಳಲ್ಲಿ ರಕ್ತಪಾತದ ಪರಂಪರೆ ಮುಂದುವರೆಯಿತು. ಮೆಲ್ಲಮೆಲ್ಲನೇ ಇಸ್ಲಾಮಿನ ಸೇನೆಯ ಮುಂದೆ ಖುರೈಶಿನ ಸೇನೆಯ ಪಾದ ಅಸ್ಥಿರವಾಗಲು ತೊಡಗಿತು.

ಪ್ರಸಿದ್ಧ ಆಂಗ್ಲ ಚರಿತ್ರೆಗಾರನಾದ ಸರ್ ವಿಲ್‌ಯಂ ಮ್ಯೂರ್ ಬರೆಯುತ್ತಾರೆ: ಮುಸ್ಲಿಮರ ಅಪಾಯಕಾರಿ ಆಕ್ರಮಣಗಳ ಮುಂದೆ ಮಕ್ಕಾದ ಸೈನಿಕರ ಪಾದ ಬುಡಮೇಲಾಗಲು ತೊಡಗಿತು. ಮುಸ್ಲಿಮರ ಕಡೆಯಿಂದ ಉಹುದಿನ ಮೈದಾನದಲ್ಲೂ ಬದ್ರಿನ ಮೈದಾನದಲ್ಲಿ ತೋರಿಸಲಾದಂತಹ ಅದೇ ಧೈರ್ಯ, ಪೌರುಷ ಹಾಗೂ ಸಾವು ಮತ್ತು ಅಪಾಯಯನ್ನು ಲೆಕ್ಕಿಸದ ಸ್ಥಿತಿ ಕಂಡುಬಂತು.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಯುದ್ಧ ನಡೆಯಿತು ಹಾಗೂ ಅಲ್ಲಾಹನ ಸಹಾಯ ಮತ್ತು ನೆರವಿನಿಂದ ಸ್ವಲ್ಪ ಸಮಯದಲ್ಲೇ 650 ಮುಸ್ಲಿಮರ ಮುಂದೆ ಮಕ್ಕಾದ ಮೂರು ಸಾವಿರ ಅನುಭವಿ ಸೈನಿಕರು ತಲೆಯ ಮೇಲೆ ಕೈಯಿಟ್ಟು ಪರಾರಿಯಾದರು. ಆ ವೇಳೆ ಪರ್ವತದ ಹಾದಿಯಲ್ಲಿದ್ದ ಮುಸ್ಲಿಮರು – ಹಝ್ರತ್ ಪೈಗಂಬರ್(ಸ) ಹೇಳಿದ್ದು ಕೇವಲ ತಾಕೀತಾಗಿ ಆಗಿತ್ತು ಎಂದೂ ಶತ್ರುಗಳು ಓಡಿ ಹೋದರೂ ಕೂಡ ನಾವು ಇಲ್ಲಿ ನಿಲ್ಲಬೇಕು ಎಂದು ಹಝ್ರತ್ ಪೈಗಂಬರ್(ಸ) ಉದ್ದೇಶಿಸಿರಲು ಸಾಧ್ಯವಲ್ಲವೆಂದೂ ಭಾವಿಸಿದರು. ಹಾಗೆ ಅವರು ಕಣಿವೆಯನ್ನು ಬಿಟ್ಟು ಯುದ್ಧ ಮೈದಾನಕ್ಕೆ ಧುಮುಕಿದರು. ಈ ಅವಿಧೇಯತೆಯಿಂದ ಅನಂತರ ಉಂಟಾದ ಪರಿಣಾಮಗಳ ಬಗ್ಗೆ ಮುಂದಿನ ಬಾರಿ ಪ್ರಸ್ತಾಪಿಸಲಾಗುವುದು.

ಹಝ್ರತ್ ಅನಸ್(ರ) ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಉಹುದಿನ ದಿನದಂದು ಒಂದು ಖಡ್ಗವನ್ನು ಹಿಡಿದು ಹೀಗೆ ಹೇಳಿದರು: ಇದನ್ನು ನನ್ನಿಂದ ಯಾರು ಪಡೆಯುವರು? ಇದರ ಹಕ್ಕುಗಳು ಏನೆಂದು ಹಝ್ರತ್ ಅಬೂದುಜಾನ(ರ) ಕೇಳಿದರು. ಹಝ್ರತ್ ಪೈಗಂಬರ್(ಸ) ಹೇಳಿದರು: ಇದರಿಂದ ಯಾವನೇ ಮುಸ್ಲಿಮನನ್ನು ವಧಿಸಬಾರದು ಹಾಗೂ ಯಾವನೇ ಸತ್ಯನಿಷೇಧಿಗೆ ಭಯಪಟ್ಟು ಓಡಬಾರದು ಮತ್ತು ಧೈರ್ಯದಿಂದ ಎದುರಿಸಬೇಕು. ಅವರು ಆ ಖಡ್ಗವನ್ನು ಪಡೆದು ಮುಶ್ರಿಕರ ವಿರುದ್ಧ ಕಾದಾಡಿ ಅದರ ಹಕ್ಕನ್ನು ನೆರವೇರಿಸಿದರು.

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಬರೆಯುತ್ತಾರೆ: ಹಝ್ರತ್ ಪೈಗಂಬರ್(ಸ)ರ ಖಡ್ಗವನ್ನು ಪಡೆಯಲು ಝುಬೇರ್(ರ) ಅತ್ಯಂತ ಹೆಚ್ಚು ಹಂಬಲಿಸಿದ್ದರು. ಆದರೆ ಹಝ್ರತ್ ಪೈಗಂಬರ್(ಸ) ಆ ಖಡ್ಗವನ್ನು ಅಬೂದುಜಾನ(ರ)ರಿಗೆ ನೀಡಿದಾಗ, ಅವರು ಆ ಖಡ್ಗದೊಂದಿಗೆ ಏನು ಮಾಡುವರು ಎಂದು ನೋಡಲು ಝುಬೇರ್(ರ) ನಿರ್ಧರಿಸಿದರು. ಹಝ್ರತ್ ಝುಬೇರ್(ರ) ಹೇಳುತ್ತಾರೆ: ಅಬೂದುಜಾನ(ರ) ಖಡ್ಗವನ್ನು ಎತ್ತಿ ಮುಶ್ರಿಕರ ಪಂಕ್ತಿಗಳಿಗೆ ನುಗ್ಗಿದರು ಮತ್ತು ಶತ್ರುಗಳನ್ನು ವಧಿಸುತ್ತಾ ಖುರೈಶಿನ ಮಹಿಳೆಯರು ನಿಂತಿದ್ದ ಸೈನ್ಯದ ಮತ್ತೊಂದು ತುದಿಗೆ ತಲುಪಿದರು.

ಅಬೂಸುಫ್‌ಯಾನಿನ ಪತ್ನಿಯಾದ ಹಿಂದ ಅವರ ಮುಂದೆ ಬಂದಳು ಮತ್ತು ಬಹಳ ಜೋರಾಗಿ ಬೊಬ್ಬೆ ಹೊಡೆದು ತಮ್ಮ ಪುರುಷರನ್ನು ಸಹಾಯಕ್ಕಾಗಿ ಕರೆದಳು. ಆದರೆ ಯಾರೂ

ಆಕೆಯ ಸಹಾಯಕ್ಕಾಗಿ ಬರಲಿಲ್ಲ. ಆಗ ಅಬೂದುಜಾನ(ರ) ತನ್ನ ಖಡ್ಗವನ್ನು ತಗ್ಗಿಸಿದರು ಮತ್ತು ಅಲ್ಲಿಂದ ಹೊರಟು ಬಂದರು. ಇದರ ಬಗ್ಗೆ ಒಮ್ಮೆ ಝುಬೇರ್(ರ) ಕೇಳಿದಾಗ ಅವರು ಹೇಳಿದರು: ಹಝ್ರತ್ ಪೈಗಂಬರ್(ಸ)ರ ಖಡ್ಗವನ್ನು ಮಹಿಳೆಯೊಬ್ಬಳ ಮೇಲೆ ಚಲಾಯಿಸಲು ನನಗೆ ಮನಸ್ಸು ಬರಲಿಲ್ಲ. ಅದು ಕೂಡ ಯಾವನೇ ಪುರುಷನು ಸಂರಕ್ಷಕನಾಗಿ ಇರದ ಮಹಿಳೆಯ ಮೇಲೆ ಹಲ್ಲೆ ನಡೆಸಲು ನಾನು ಸಿದ್ಧನಾಗಿರಲಿಲ್ಲ.

ಹಝ್ರತ್ ಮುಸ್ಲಿಹ್ ಮೌಊದ್(ರ) ಬರೆಯುತ್ತಾರೆ: ಸ್ತ್ರೀಗಳನ್ನು ಆದರಿಸಲು ಹಝ್ರತ್ ಪೈಗಂಬರ್(ಸ) ಸದಾ ಕಲಿಸುತ್ತಿದ್ದರು. ಆದ್ದರಿಂದ ಸತ್ಯನಿಷೇಧಿಗಳಾದ ಮಹಿಳೆಯರು ಬಹಳ ಧೈರ್ಯದಿಂದ ಮುಸ್ಲಿಮರಿಗೆ ಹಾನಿ ಉಂಟುಮಾಡಲು ಪ್ರಯತ್ನಿಸುತ್ತಿದ್ದರು. ಹೀಗಿದ್ದರೂ ಮುಸ್ಲಿಮರು ಅವುಗಳನ್ನು ಸಹಿಸುತ್ತಾ ಹೋಗುತ್ತಿದ್ದರು. ಒಟ್ಟಿನಲ್ಲಿ ಇವುಗಳಾಗಿವೆ ಇಸ್ಲಾಮಿನ ಯುದ್ಧ ನಿಯಮಗಳು. ಉಳಿದ ಭಾಗ ಮುಂದಿನ ಬಾರಿ ಪ್ರಸ್ತಾಪಿಸಲಾಗುವುದು – ಇನ್‌ಶಾ ಅಲ್ಲಾಹ್.

ಖುತ್ಬದ ಕೊನೆಯಲ್ಲಿ ಹುಝೂರ್ ಹೇಳಿದರು: ಪೆಲಸ್ತೀನಿಯರಿಗಾಗಿಯೂ ದುಆಗಳನ್ನು ಮಾಡುತ್ತಿರಿ. ದಿನೇ ದಿನೇ ದೌರ್ಜನ್ಯಗಳು ಮಿತಿಮೀರುತ್ತಾ ಹೋಗುತ್ತಿವೆ ಮತ್ತು ವರ್ಧಿಸುತ್ತಿವೆ. ಅಲ್ಲಾಹನು ಇನ್ನು ದೌರ್ಜನ್ಯಗಾರರನ್ನು ಹಿಡಿಗೂಡಲಿ. ಪೀಡಿತ ಪೆಲಸ್ತೀನಿಯರು ನಿಟ್ಟುಸಿರು ಬಿಡುವಂತಾಗಲಿ. ಮುಸ್ಲಿಮ್ ರಾಷ್ಟ್ರಗಳಿಗೂ ಅಲ್ಲಾಹನು ಬುದ್ಧಿ ಮತ್ತು ವಿವೇಕವನ್ನು ನೀಡಲಿ. ಅವರ ದನಿ ಒಂದಾಗಲಿ ಮತ್ತು ಅವರು ಮುಸ್ಲಿಂ ಸಹೋದರರ ಹಕ್ಕುಗಳನ್ನು ಈಡೇರಿಸಲು ಪ್ರಯತ್ನಿಸುವವರಾಗಲಿ.

*****

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَا هَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُ بِالْعَدْلِ وَالْاِحْسَانِ وَاِيْتَآءِ ذِي الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis****(atba)*
*At, **'Masjid Mubarak'**, Islamabad, Tilford, UK.* On 15-12-2023
**Summarized by** *Majlis Ansarullah Bharat*
***Kannada Translation****:* Moulavi Inamullah for Kannada Desk, Qadian
***Reviewed by****:* M.P Ibrahim |***Layout****:* U Basheer Ahmad
***Published By****:* Kannada Isha'at Team for Nazarath Nashr-O-Isha'ath, Qadian
***Email****:* *khutuba.kannada@gmail.com*
**You can find all the Sermons archived at**: www.alislam.org/friday-sermon